ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ / DATE : [illegible]

# ಗೋಲಿಬಾರ್ ನ್ಯಾಯಾಂಗ ತನಿಖೆ ಇಲ್ಲ

## ಮ್ಯಾಜಿಸ್ಟ್ರೇಟ್, ಸಿಐಡಿ ತನಿಖೆ | ಬೀದರ್‌ನ ಶಾಹೀನ್ ದೇಶದ್ರೋಹ ಕೇಸೂ ವಾಪಸಿಲ್ಲ

## ಪ್ರತಿಪಕ್ಷಗಳಿಗೆ ಗೃಹ ಸಚಿವ ಬೊಮ್ಮಾಯಿ ಸ್ಪಷ್ಟ ಉತ್ತರ | ಕಾಂಗ್ರೆಸ್ ಆಕ್ಷೇಪ, ಸಭಾತ್ಯಾಗ

• **ಕನ್ನಡಪ್ರಭ ವಾರ್ತೆ** ವಿಧಾನಸಭೆ


ಮಂಗಳೂರುಗೋಲಿಬಾರ್‌ಪ್ರಕರಣವನ್ನುನ್ಯಾಯಾಂಗ ತನಿಖೆಗೆ ವಹಿಸಬೇಕು ಹಾಗೂ ಬೀದರ್ ಶಾಹೀನ್ ಶಾಲೆ ಪ್ರಕರಣ ಸೇರಿದಂತೆ ವಿವಿಧ ವ್ಯಕ್ತಿಗಳ ಮೇಲೆ ದಾಖಲಿಸಿರುವ ದೇಶದ್ರೋಹ ಪ್ರಕರಣ ಹಿಂಪಡೆಯಬೇಕು ಎಂಬ ವಿರೋಧಪಕ್ಷದಬೇಡಿಕೆಯನ್ನುರಾಜ್ಯಸರ್ಕಾರಸ್ಪಷ್ಟವಾಗಿ ನಿರಾಕರಿಸಿದೆ. ಅಲ್ಲದೆ, ಮ್ಯಾಜಿಸ್ಟ್ರೇಟ್ ವಿಚಾರಣೆಹಾಗೂ ಸಿಐಡಿ ತನಿಖೆ ಮಾತ್ರವೇನಡೆಸುತ್ತೇವೆಎಂದು ಗೃಹಸಚಿವ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ.

ಸಚಿವರ ಉತ್ತರಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯ ಸರ್ಕಾರವು ಮಂಗಳೂರಿನಲ್ಲಿ ಅಮಾಯಕರನ್ನು ಕೊಂದಿದೆ. ಅಲ್ಲದೆ, ಸರ್ಕಾರವೇ ಕುಮ್ಮಕ್ಕು ನೀಡಿ ಸಿಎಎ ವಿರೋಧಿಸುವವರ ಮೇಲೆ ಸುಳ್ಳು ದೇಶದ್ರೋಹ ದಾಖಲಿಸುತ್ತಿದೆ. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕಾದರೆ ಗೋಲಿಬಾರ್ ಪ್ರಕರಣದ ನ್ಯಾಯಾಂಗ ತನಿಖೆ ಆಗಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಸದಸ್ಯರೊಂದಿಗೆ ಸಭಾತ್ಯಾಗ ಮಾಡಿದರು.

ಬುಧವಾರ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ ಎಂಬ ವಿಚಾರವಾಗಿ ಗೊತ್ತುವಳಿ ಸೂಚನೆ ಮಂಡಿಸಿದ್ದರು. ಈ ಬಗ್ಗೆ ನಿಯಮ 69ರ ಪ್ರಕಾರ ಗುರುವಾರ ದಿನವಿಡೀ ಆಡಳಿತ ಹಾಗೂ ಪ್ರತಿಪಕ್ಷದ ಸದಸ್ಯರಿಂದ ತೀವ್ರ ಚರ್ಚೆ ನಡೆಯಿತು.

ಚರ್ಚೆ ಬಳಿಕ ಉತ್ತರ ನೀಡಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ವಿಫಲವಾಗಿಲ್ಲ. ಮಂಗಳೂರಿನಲ್ಲಿ ಉಂಟಾಗಬಹುದಾಗಿದ್ದ ಭಾರೀ ಕೋಮು ಗಲಭೆ ತಡೆಯಲುಗೋಲಿಬಾರ್‌ನಡೆಸಲಾಗಿದೆ. ನೈತಿಕತೆಯನ್ನು ಹಾಳು ಮಾಡುವ ಕೆಲಸವನ್ನು ಸರ್ಕಾರ ಮಾಡುವುದಿಲ್ಲ. ಹೀಗಾಗಿ ನ್ಯಾಯಾಂಗ ತನಿಖೆಗೆ ವಹಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಅಲ್ಲದೆ, ಇನ್ನು ಮುಂದೆಯೂ ಗಲಭೆಕೋರರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ. ಅದನ್ನು ಬೆಂಬಲಿಸುವ ಸಂಘ ಸಂಸ್ಥೆಗಳನ್ನೂ ಸರ್ಕಾರ ಸಹಿಸುವುದಿಲ್ಲ. ಇದರಲ್ಲಿ ರಾಜಕೀಯ ಬೆರೆಸಲು ಯತ್ನಿಸಬಾರದು ಎಂದರು.



### ಗೋಲಿಬಾರ್: ಪರಿಹಾರ ಇಲ್ಲ

**ಗೋ**ಲಿಬಾರ್‌ನಲ್ಲಿಮೃತಪಟ್ಟಇಬ್ಬರವ್ಯಕ್ತಿಗಳಕುಟುಂಬಗಳಿಗೆ ಪರಿಹಾರಘೋಷಿಸಿಹಿಂಪಡೆಯಲುಸುಪ್ರೀಂಕೋರ್ಟ್‌ತೀರ್ಪು ಕಾರಣ ಎಂದು ಗೃಹ ಸಚಿವ ಬೊಮ್ಮಾಯಿ ಹೇಳಿದರು. ಗೋಲಿಬಾರ್‌ನಲ್ಲಿ ಗಲಭೆಕೋರರು ಮೃತಪಟ್ಟರೆ ಅವರಿಗೆ ಪರಿಹಾರ ನೀಡಲು ಬರುವುದಿಲ್ಲ ಎಂದು ಮುಲ್ಕಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಹೀಗಾಗಿ ಪರಿಹಾರ ಭರವಸೆ ಹಿಂಪಡೆಯಲಾಗಿದೆಯೇ ಹೊರತು ರಾಜಕೀಯ ಅಥವಾ ಇನ್ನಾವುದೇ ಒತ್ತಡಗಳಿಂದ ಅಲ್ಲ ಎಂದು ಸ್ಪಷ್ಟಪಡಿಸಿದರು.

### ಸಿಎಎ ವಿರುದ್ಧ 736 ಪ್ರತಿಭಟನೆ ನಡೆದಿವೆ

**ಕ**ರ್ನಾಟಕದ ಪೊಲೀಸರು ಜನರಿಗೆ ನಿಷ್ಠರಾಗಿ ಇರುತ್ತಾರೆಯೇ ಹೊರತು ಸರ್ಕಾರಕ್ಕಲ್ಲ. ರಾಮಜನ್ಮಭೂಮಿ ತೀರ್ಪು, 370 ವಿಧಿ ರದ್ದು ಸೇರಿದಂತೆ ಪ್ರಮುಖ ಬೆಳವಣಿಗೆಗಳಲ್ಲಿ ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಪಾಲಿಸುವಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಸಿಎಎ ವಿಚಾರವಾಗಿಯೂ ನಮ್ಮ ಸರ್ಕಾರ ಪ್ರತಿಭಟನೆ ಹತ್ತಿಕ್ಕುವ ದಮನಕಾರಿ ನಡೆ ಅನುಸರಿಸಿಲ್ಲ. ರಾಜ್ಯದಲ್ಲಿಸಿಎಎ ವಿರುದ್ಧ 736 ಪ್ರತಿಭಟನೆ ನಡೆದಿವೆ. ಬೆಂಗಳೂರಿನಲ್ಲಿ 20ಕ್ಕೂ ಹೆಚ್ಚು ಕಡೆ ಪ್ರತಿಭಟನೆ ನಡೆದಿದ್ದು, ಹಲವು ಕಡೆ ಲಕ್ಷಾಂತರ ಜನರು ಭಾಗವಹಿಸಿದ್ದರೂ ಒಂದೂ ಗಲಭೆ ನಡೆದಿಲ್ಲ ಎಂದು ಬೊಮ್ಮಾಯಿ ವಿವರಿಸಿದರು.